# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | **1400** |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22-08-2025. |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ. | ಮೂಡಿಗೆರೆ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ 2023ನೇ ಸಾಲಿನಲ್ಲಿ ಅಧಿಕಾರಿಗಳು ಮಹಾವಿದ್ಯಾಲಯದ ವ್ಯಾಪ್ತಿಯ ಮಗ್ಗಲಮಕ್ಕಿ ಸರ್ವೆ ನಂಬರ್ 223 ರಿಂದ ಅಕ್ರಮವಾಗಿ ಮಣ್ಣು ಸಾಗಾಟ ಮಾಡಿರುವ ಕುರಿತಂತೆ ಅಪರಾಧ ಪ್ರಕರಣ ದಾಖಲೆಯಾಗಿದೆಯೇ; ಸ್ಥಳೀಯರು ದೂರು ನೀಡಿದ್ದರೂ ವಿಶ್ವವಿದ್ಯಾಲಯದ ಕುಲಪತಿಗಳು ಇಲ್ಲಿಯವರೆಗೂ ಯಾವುಧೇ ಕ್ರಮ ಕೈಗೊಳ್ಳದಿರಲು ಕಾರಣವೇನು; ಪ್ರಕರಣ ದಾಖಲಾಗಿದ್ದರೆ ಪ್ರಸ್ತುತ ವಿಚಾರಣ ಯಾವ ಹಂತದಲ್ಲಿ ಇದೆ; | ಮೂಡಿಗೆರೆ ತೋಟಗಾರಿಕೆ ಮಹಾವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ.<br><br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ನಾರಾಯಣ ಎಸ್ ಮಾವರ್ಕರ್, ಡೀನ್ (ತೋಟಗಾರಿಕೆ) ಮತ್ತು ಡಾ. ಸಿ ಎಸ್ ರವಿ, ಸಹಾಯಕ ಪ್ರಾಧ್ಯಾಪಕರು, ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ ಇವರ ವಿರುದ್ಧ ತಾಲ್ಲೂಕು ಉಪಾಧ್ಯಕ್ಷರು, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ , ಮೂಡಿಗೆರೆ, ಚಿಕ್ಕಮಗಳೂರು ಇವರು ದೂರನ್ನು ಸಲ್ಲಿಸಿರುತ್ತಾರೆ.<br><br>ವಿಶ್ವವಿದ್ಯಾಲಯವು ಸದರಿ ದೂರಿನ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ (ನಿವೃತ್ತ ನ್ಯಾಯಾಧೀಶರು) ಮತ್ತು ಮಂಡನಾಧಿಕಾರಿಯನ್ನೊಳಗೊಂಡ ಸಮಿತಿಯನ್ನು ರಚಿಸಿರುತ್ತದೆ. ಅಂತಿಮ ವರದಿ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿರುತ್ತದೆ. ಸದರಿ ದೂರಿನ ಇಲಾಖಾ ವಿಚಾರಣೆಯು ವಿಶ್ವವಿದ್ಯಾಲಯ ಹಂತದಲ್ಲಿಯೇ ಪೂರ್ಣಗೊಂಡಿರುತ್ತದೆ. |
| ಆ. | ಅಕ್ರಮದಲ್ಲಿ ಭಾಗಿಯಾಗಿರುವವರ ಕುರಿತು ಈವರೆಗೆ ವಿಶ್ವವಿದ್ಯಾಲಯವು ಯಾವ ಕ್ರಮ ಕೈಗೊಂಡಿದೆ; ಸುಧೀರ್ಘ ಅವಧಿಗೆ ಇಲಾಖೆ ವಿಚಾರಣೆ ನಡೆಯಲು ಕಾರಣರಾದ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮವೇನು; ಎಷ್ಟು ಅವಧಿಯೊಳಗೆ ತಪ್ಪಿತಸ್ಥರ ವಿರುದ್ಧ ತನಿಖೆ ಪೂರ್ಣಗೊಳಿಸಿ ಶಿಕ್ಷೆ ವಿಧಿಸಲಾಗುವುದು; | ಇಲಾಖಾ ವಿಚಾರಣಾ ವರದಿಯಲ್ಲಿ ಡಾ. ನಾರಾಯಣ ಎಸ್ ಮಾವರ್ಕರ್, ಡೀನ್ (ತೋಟಗಾರಿಕೆ) ಮತ್ತು ಡಾ. ಸಿ. ಎಸ್. ರವಿ, ಸಹಾಯಕ ಪ್ರಾಧ್ಯಾಪಕರು, ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ ಇವರ ಪಾತ್ರ ಇರುವುದಿಲ್ಲ ಎಂದು ವಿಚಾರಣಾಧಿಕಾರಿಗಳು ತಿಳಿಸಿದ್ದು, ವಿಚಾರಣಾಧಿಕಾರಿಯವರು ಸಲ್ಲಿಸಿರುವ ಇಲಾಖಾ ವಿಚಾರಣಾ ವರದಿಯನ್ನು ಒಪ್ಪಿ ವಿಶ್ವವಿದ್ಯಾಲಯದ ಹಂತದಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. |

| | | |
|---|---|---|
| ಇ. | ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ ಕತ್ತಲಗೆರೆಯಲ್ಲಿ ಡಿಪ್ಲೋಮಾ ಕೋರ್ಸ್ ನಿಲ್ಲಿಸಿದ್ದು ಕಟ್ಟಡ ಹಾಗೂ ಇತರೆ ಸೌಲಭ್ಯಗಳನ್ನು ಸರಿಯಾಗಿ ಉಪಯೋಸಿಕೊಳ್ಳದೆ ಹಾಳಾಗುತ್ತಿದ್ದು ಅಲ್ಲಿ ಯಾವುದಾದರೂ ಪದವಿಯನ್ನು ಪ್ರಾರಂಭ ಮಾಡುವ ಆಲೋಚನೆ ಇದೆಯೇ; | ದಾವಣಗೆರೆ ಜಿಲ್ಲೆಯಲ್ಲಿ ತೋಟಗಾರಿಕೆ ಕಾಲೇಜಿನ ಅಗತ್ಯತೆಯನ್ನು ಪರಿಗಣಿಸಿ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕತ್ತಲಗೆರೆಯಲ್ಲಿ ಲಭ್ಯವಿರುವ ಭೂಮಿ, ಕಟ್ಟಡ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ನೂತನ ತೋಟಗಾರಿಕೆ ಮಹಾವಿದ್ಯಾಲಯವನ್ನು ಆರಂಭಿಸುವ ಪ್ರಸ್ತಾವನೆಗೆ ತಾತ್ವಿಕ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. |
| ಈ | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಅವ್ಯವಹಾರ ಮಾಡಿದ ಹಣಕಾಸು ಅಧಿಕಾರಿಯನ್ನು ನಿವೃತ್ತಿ ನಂತರ ಮತ್ತೆ ಅದೇ ವಿಶ್ವವಿದ್ಯಾಲಯದಲ್ಲಿ ಆಡಳಿತ ಸಲಹಾ ಅಧಿಕಾರಿಗಳನ್ನಾಗಿ ನೇಮಿಸಿಕೊಂಡಿರಲು ಕಾರಣವೇನು; ಈ ಕುರಿತು ಸರ್ಕಾರದ ಸರಿಪಡಿಸುವ ಕ್ರಮಗಳೇನು: | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದಲ್ಲಿ ಇದುವರೆಗೂ ಯಾವುದೇ ಬೋಧಕೇತರ ಹುದ್ದೆಗಳ ನೇಮಕಾತಿಯಾಗಿರುವುದಿಲ್ಲ ಹಾಗೂ ವಿಶ್ವವಿದ್ಯಾಲಯದ ಖಾಯಂ ನೌಕರರು ವಯೋನಿವೃತ್ತಿ ಹೊಂದುತ್ತಿರುವುದರಿಂದ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಮಹಾವಿದ್ಯಾಲಯಗಳು, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಗಳಲ್ಲಿ ಆಡಳಿತಾತ್ಮಕ ಮತ್ತು ಆಂತರಿಕ ಲೆಕ್ಕಪರಿಶೋಧನಾ ಕೆಲಸಗಳನ್ನು ನಿರ್ವಹಿಸಲು ಸೇವಾ ಅನುಭವ ಹೊಂದಿರುವ ನೌಕರರ ಅವಶ್ಯಕತೆ ಇರುವುದರಿಂದ ನಿವೃತ್ತ ಹಣಕಾಸು ಅಧಿಕಾರಿಯನ್ನು ವಿಶ್ವವಿದ್ಯಾಲಯವು ಆಡಳಿತ ಸಲಹೆಗಾರರನ್ನಾಗಿ ನಿಯೋಜಿಸಿದೆ. |
| ಉ. | ರಾಜ್ಯದ ಇತರೆ ಕೃಷಿ ವಿಶ್ವವಿದ್ಯಾಲಯ ಗಳಲ್ಲಿರುವಂತೆ ಆಡಳಿತ ಅಧಿಕಾರಿಗಳಾದ ಕುಲಸಚಿವರು ಹಾಗೂ ಹಣಕಾಸು ನಿಯಂತ್ರಣಾಧಿಕಾರಿಗಳು ಹುದ್ದೆಗೆ ಸರ್ಕಾರ KAS ಅಧಿಕಾರಿಗಳನ್ನು ನೇಮಕ ಮಾಡದಿರಲು ಕಾರಣವೇನು; ಯಾವಾಗ ಈ ಹುದ್ದೆಗಳಿಗೆ ಸೂಕ್ತ ಅಧಿಕಾರಿಗಳನ್ನು ನೇಮಕ ಮಾಡಲಾಗುವುದು? | ಕೃಷಿ ವಿಶ್ವವಿದ್ಯಾಲಯಗಳ ಅಧಿನಿಯಮದನ್ವಯ ಕುಲಸಚಿವರ ಹುದ್ದೆಯಲ್ಲಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳನ್ನು ನೇಮಿಸಲು ಅವಕಾಶವಿರುತ್ತದೆ. ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕಾರಿಗಳು ಕುಲಸಚಿವರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳ ನೇಮಕವಾಗಿರುವುದಿಲ್ಲ. |

ಸಂಖ್ಯೆ: AGRI/34/AUS/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು